ಅಲ್ಲ ಹಂಪಿಯ ಆತ್ಮಗಳೆಲ್ಲ ತಂಪಾಗಿ ತಲೆದೂಗಬೇಕು. ಆ ಮೆಲೊಡಿ ಮಾತ್ರ ಬರ್ನಾಡೋದೆ ಇರಬೇಕು' ಒಂದು ಕ್ಷಣ ಮಾತು ನಿಲ್ಲಿಸಿದರು.

ಮತ್ತೆ ಅವಿನಾಶನತ್ತ ನೋಡುತ್ತಾ, 'ಈ ವೀರೇಶನ ಹುಟ್ಟಿಗೆ ಕಾರಣನಾದವ ಆ ಬರ್ನಾಡೊ. ಹಾಗಂತ ಅಪ್ಪ ಅಂತ ಹೇಳಿದ್ರೆ ತಪ್ಪಾಗುತ್ತೆ. ಆತ ಜರ್ಮನಿಯವನೇ. ಒಳ್ಳೆಯ ಹಾರ್ಮೋನಿಯಂ ಕಲಾವಿದ. ಇಲ್ಲೇ ಹಂಪಿಯಲ್ಲಿ ಕೆಲವು ಕಾಲ ಇದ್ದ. ಇಲ್ಲೇ ಎಲ್ಲಾದರೂ ಕುಳಿತು ತನ್ನಪಾಡಿಗೆ ಹಾರ್ಮೋನಿಯಂ ನುಡಿಸುತ್ತಿದ್ದ. ನಾನೂ ಕೇಳಿದ್ದಿದೆ. ಅದೆಂಥಾ ನಾದ ಅಂತಿರಿ. ಕೇಳಿದವರ ಎದೆ ಕರಗಬೇಕು. ಈ ಚಂದುಗು ಅವನಿಗೂ ಹೇಗೋ ಜೋಡಿ ಆಯ್ತು. ತಾಂಡಾದೊಳಗೆ ಗೊತ್ತಾಗಿ ಗಲಾಟೆ ಆಯ್ತು. ಪಂಚಾಯ್ತಿ ಮಾಡಿ ಕೊನೆಗೆ ದಂಡ ಕಟ್ಟಿ ಮದುವೆ ಮಾಡಿಸು ಅಂತ ಅವಳ ತಂದೆ- ತಾಯಿಗೆ ಕಟ್ಟಪ್ಪಣೆ ಮಾಡಿದರಂತೆ. ಆತ ತಾನು ನೀವು ಹೇಳಿದ್ದನ್ನು ಮಾಡುವೆ. ಆದರೆ, ಇಲ್ಲೇ ಇರಲು ಸಾಧ್ಯ ಇಲ್ಲ. ವರ್ಷದಲ್ಲಿ ಎರಡು ಬಾರಿ ಬಂದು ಹೋಗ್ತೀನಿ ಅಂದಿದ್ನಂತೆ. ಹುಡುಗಿಯ ತಂದೆ- ತಾಯಿ ಮದುವೆ ಆಟ ಆಡಿದ್ರು. ಅವರಿಗೆ ಬಹಿಷ್ಕಾರದಿಂದ ತಪ್ಪಿಸ್ಕೊಬೇಕಿತ್ತು. ಅವ್ನು ಈ ಆಟ ನಡೆದ ತಿಂಗಳೊಳಗೆ ಒಂದಿನ ಮಾಯವಾದ. ಮತ್ತೆ ಇಲ್ಲಿ ತನಕ ಬರಲಿಲ್ಲ. ನನ್ನ ಹೆಂಡ್ತಿ ಶಾಲಿನಿಗೆ ಲಂಬಾಣಿ ಹೆಂಗಸರ ಜೊತೆ ಒಳ್ಳೆಯ ಸ್ನೇಹ. ಅವಳು ಆರ್ಟಿಸ್ಟ್. ಆಗಷ್ಟೇ ಹೆರಿಟೇಜ್ ಫ್ಲವರ್ ಅಂತ ಸಣ್ಣದಾಗಿ ಬೊಟಿಕ್ ಸುರು ಮಾಡಿದ್ದಳು. ಬರ್ನಾಡೊ ಹೋದ ಮೇಲೆ ತಾಂಡಾದೊಳಗೆ ಮತ್ತೆ ಕಿರಿಕಿರಿ ಸುರುವಾದಾಗ ಚಂದುಳನ್ನ ಅವಳ ಬೊಟಿಕ್ನಲ್ಲಿ ಸಹಾಯಕಿಯಾಗಿ ಸೇರಿಸಿಕೊಂಡು ಒಂದಷ್ಟು ಸಮಯ ನಮ್ಮನೆಯಲ್ಲೇ ಉಳಿಸಿಕೊಂಡಿದ್ಲು. ನಮ್ಮ ಮಗಳು ಆಗ ಹೈಸ್ಕೂಲ್ ಓದುತ್ತಿದ್ಲು. ಈ ವೀರೇಶ ಹುಟ್ಟಿದಾಗ ನಾನು ರಜದಲ್ಲಿ ಊರಿಗೆ ಬಂದಿದ್ದೆ. ಮಗೂನ ತಂದು ಕೈಗೆ ಕೊಟ್ಳು. ಮಗು ನೋಡ್ತಾ ನಾವಿಬ್ರು ಆ ಬರ್ನಾಡೋ ಅನ್ನುವವನ ಬಗ್ಗೆ ಮಾತಾಡ್ತಾ ಅವನೊಬ್ಬ ಆಧುನಿಕ ಅರ್ಜುನ, ಇವಳೋ ಅರಮನೆ ಇಲ್ಲದ ಚಿತ್ರಾಂಗದೆ. ಈ ಪುಟಾಣಿ ಅಭಿನವ ಬಬ್ರುವಾಹನ ಅಂದುಬಿಟ್ಟೆವು. ಈ ಹುಡುಗಿ ಮಗುನ್ನ ಬಬ್ರು ಅಂತ ಕರೆದೇ ಬಿಟ್ಟಳು. ಅದನ್ನೇ ಕಾಯಂ ಮಾಡಿಕೊಂಡಳು. ಹುಡುಗ ನಮ್ಮನೆ ಅಂಗಳದಲ್ಲೇ ಆಡಿ ದೊಡ್ಡವನಾದ. ನಮ್ಮ ಮಗಳು ನಿಸರ್ಗ ಅವನಿಗೆ ಅಕ್ಕನಾಗಿಬಿಟ್ಟಿದ್ದಳು. ಅವಳು ಹೈಸ್ಕೂಲ್ ಮುಗಿಸಿ ಬೆಂಗಳೂರಲ್ಲಿ ಕಾಲೇಜು ಸೇರಿಕೊಂಡಳು. ಆ ಹೊತ್ತಿಗೆ ಶಾಲಿನಿಯ ಬೊಟಿಕ್ ಬಗ್ಗೆ ಇಂಗ್ಲಿಷ್ ಪತ್ರಿಕೆಯಲ್ಲಿ ಒಳ್ಳೆಯ ಆರ್ಟಿಕಲ್ ಬಂದು ಅದನ್ನೋದಿ ಹುಡುಕಿ ಬಂದವಳು ಈ ಬಾದಲ್. ಬಹಳ ಒಳ್ಳೆಯ ಮಧುಬನಿ ಆರ್ಟಿಸ್ಟ್. ಇವಳ ಕುಟುಂಬದ ಹಿರಿಯರು ಪಂಜಾಬಿನವರಂತೆ. ಇವಳು ಹುಟ್ಟಿ ಬೆಳೆದಿದ್ದೆಲ್ಲ ಬೆಂಗಳೂರು. ಅವಳಿಗೆ ಕಲೆ ಜೊತೆ ವ್ಯಾಪಾರ ಗೊತ್ತಿತ್ತು. ಚಂದುಗೆ ಒಳ್ಳೆಯ ತರಬೇತಿ ಕೊಟ್ಟಳು. ಶಾಲಿನಿ ತನ್ನ ಕ್ರಿಯೇಟಿವಿಟಿಯನ್ನು ದುಡಿಸಿ ಮಧುಬನಿ ಕಲೆ, ಲಂಬಾಣಿ ಕಲೆ ಮಿಶ್ರ ಮಾಡಿ ಪೇಂಟಿಂಗ್ ಪ್ರಯೋಗ ಮಾಡಿದಳು. ನಾನು ರಜದಲ್ಲಿ ಬಂದಾಗಲೆಲ್ಲ ಈ ಹುಡುಗ ನನಗೆ ಕಂಪೆನಿ. ನನ್ನ ಜೊತೆ ಸುತ್ತಾಡುತ್ತ ಹಂಪಿಯ ಕಥೆ ಕೇಳ್ತಿದ್ದ. ಶಾಲೆಗೆ ಸೇರಿಸುವಾಗ ನಾನೇ ವೀರೇಶ ಅಂತ ಹೆಸರು ಹಾಕಲು ಹೇಳಿದ್ದೆ. ಚಂದು ಮಾತ್ರ ಇವತ್ತಿಗೂ ಬಬ್ರು ಎಂದೇ ಕರಿತಾಳೆ. ಶಾಲೆಯಲ್ಲಿ ಅಪ್ಪ ಯಾರು ಎಂದಾಗ ನನ್ನ ಹೆಸರು ಹೇಳಿ ಮೇಷ್ಟ್ರಿಂದ ಒದೆ ತಿಂದನಂತೆ. ಅವಳು ಏನು ಮಾಡೋದು ಕೇಳಿದಳು. ಕೊನೆಗೆ ಅವನಿಗೊಬ್ಬ ತಂದೆ ಇದ್ದ. ಚಕ್ರತೀರ್ಥದ ಸುಳಿಗೆ ಬಲಿಯಾದ ಎಂದೆಲ್ಲ ಹೇಳಿ ನಂಬಿಸಿದೆವು. ನಂಗೆ ಇಂಗ್ಲೆಂಡ್ ಯೂನಿವರ್ಸಿಟಿಯಲ್ಲಿ ಕೆಲಸ ಆದಾಗ ನಾವು ವಿದೇಶಕ್ಕೆ ಹೊರಡಬೇಕಾಯ್ತು. ಶಾಲಿನಿ ಹೊರಡಲು ಮನಸು ಮಾಡಲಿಲ್ಲ. ಆವಾಗ ಬಾದಲ್ ಪೂರ್ತಿ ಜವಾಬ್ದಾರಿ ತಗೊಂಡು ಧೈರ್ಯ ತುಂಬಿದಳು. ಆ ಸಮಯದಲ್ಲಿ ಬೊಟಿಕ್ ಮನೆಯಲ್ಲೇ ಇತ್ತು. ಹಾಗಾಗಿ ಮನೆಯ ಕೀ ಇಲ್ಲೇ ಇತ್ತು. ಹೆಂಡ್ತಿ ವರ್ಷಕ್ಕೊಮ್ಮೆ ಬಂದು ಇಲ್ಲಿ ಮೂರು ತಿಂಗಳು ಇರುತ್ತಿದ್ದಳು. ಈ ಹುಡುಗ ನನ್ನ ಲೈಬ್ರೆರಿಯಲ್ಲಿರುವ ಹಂಪಿಗೆ ಸಂಬಂಧಪಟ್ಟ ಪುಸ್ತಕಗಳನ್ನು ಓದುತ್ತಿದ್ದನಂತೆ. ಬೊಟಿಕ್ ಇಲ್ಲಿಗೆ

